ಸುಮಾರು ಹತ್ತು ವರ್ಷಗಳ ಹಿಂದೆ, ಜಕ್ಕೂರಿನಲ್ಲಿ, ನನ್ನ ಮನೆಯ ಬಳಿ ಒಂದು ರಸ್ತೆಯ ಬದಿಯಲ್ಲಿ ಪ್ರತಿನಿತ್ಯವೂ ಕಾಣುತ್ತಿದ್ದ ವಿಶಿಷ್ಟ ದೃಶ್ಯವೊಂದು ನನ್ನಲ್ಲಿ ಸಾವು ಬದುಕುಗಳ ಬಗ್ಗೆ ಸದಾ ಒಂದು ಪ್ರಶ್ನೆಯನ್ನು ಹುಟ್ಟುಹಾಕುತ್ತಿತ್ತು. ನನ್ನೊಳಗೆ ನಾನೇ ವಿಚಿತ್ರವಾದ ಜಿಜ್ಞಾಸೆಗೆ ಜಾರುವಂತೆ ಮಾಡಿದ್ದ ಆ ಪ್ರಶ್ನೆಯಂತೂ ನನ್ನಲ್ಲಿನ ಅಮಾನವೀಯತೆಗೆ ಕನ್ನಡಿ ಹಿಡಿಯುವುದರ ಜೊತೆಗೆ, ನನ್ನ ಸ್ವಾರ್ಥವನ್ನೂ ಬಿಚ್ಚಿ ತೋರಿಸುತ್ತಿತ್ತು. ಆದರೂ ಆ ಪ್ರಶ್ನೆ ನನ್ನಲ್ಲಿನ ವಿಜ್ಞಾನ 'ಪ್ರಜ್ಞೆ'ಯಿಂದ ಮೂಡಿದ್ದ ಕಾರಣ ನಾನು ಯಾವುದೇ ಪಾಪಪ್ರಜ್ಞೆಯಿಂದ ಮರುಗಲಿಲ್ಲ.

## ಮೊದಲಿಗೆ ಆ ದೃಶ್ಯದ ಬಗ್ಗೆ...

ಆತನಿಗೆ ಸುಮಾರು 60 ವರ್ಷ ಇರಬಹುದು. ಮುಖದ ತುಂಬ ಬೆಳೆದ ಗಡ್ಡ, ಎಂದೂ ಬಾಚಿರದಿದ್ದ, ಕತ್ತರಿಸದ ಚದುರಿದ ತಲೆಗೂದಲು. ಸಣಕಲು ದೇಹ. ಮೈಯ ಮೇಲಿದ್ದ ಎಲ್ಲ ಬಟ್ಟೆಗಳು ಮೇಲಿನಿಂದ ಕೆಳಗಿನವರೆಗೂ ಯಾವಾಗಲೋ ಹರಿದು ಹೋಗಿದ್ದವು; ಆತನ (ದು)ಸ್ಥಿತಿಯನ್ನು ಸಾರಿ ಹೇಳುವಂತೆ. ಆ 'ಅಜ್ಞಾತ' ವಾಸಿಸುತ್ತಿದ್ದುದು ರಸ್ತೆಯ ಬದಿಯಲ್ಲಿ ತಾನೇ ನೆಟ್ಟಿದ್ದ ಸಣ್ಣ ಟೆಂಟಿನಂತಹ 4X6 ಅಡಿಗಳ ಒಂದು ಜೋಪಡಿಯಲ್ಲಿ. ಎರಡೂ ಕಡೆ, ಮರದ ಕಡ್ಡಿಗಳನ್ನು ತ್ರಿಕೋನಾಕಾರದಲ್ಲಿ ನೆಟ್ಟು ಅವುಗಳ ನಡುವೆ ಜೋಡಿಸಿದ್ದ ಆರು ಅಡಿ ಕೋಲಿನ ಮೇಲೆ ಇಳಿಬಿಟ್ಟಿದ್ದ ಪ್ಲಾಸ್ಟಿಕ್ ಹೊದಿಕೆಯ ಕೆಳಗಿನ ನೆರಳ ವಸತಿಯೇ ಆತನ ಅರಮನೆ; ಅಷ್ಟೂ ನೆಲ ಆತನ ಭೂಮಿ– ಸ್ಥಿರಾಸ್ತಿ. ಸದಾ ತನ್ನ ಬೆನ್ನಲ್ಲಿ ಹೊತ್ತೊಯ್ಯುತ್ತಿದ್ದ ಒಂದು ಗೋಣಿಚೀಲವೇ ನಾನು ಕಂಡ ಆತನ ಚರಾಸ್ತಿ. ಆ ಚರಾಸ್ತಿಯಲ್ಲಿ ಏನಿತ್ತು ಎನ್ನುವುದು ನನಗೆ ಇಂದಿಗೂ ಬಿಡಿಸಲಾರದ ಕಗ್ಗಂಟು. ಆತ ಭಿಕ್ಷುಕನಂತೂ ಆಗಿರಲಿಕ್ಕಿಲ್ಲ, ಕಾರಣ ಯಾರಲ್ಲಿಯೂ ಏನನ್ನೇ ಆಗಲಿ ಬೇಡುತ್ತಿದ್ದುದ್ದು ನನಗೆ ಕಾಣಲಿಲ್ಲ.

ವಿಶೇಷವೆಂದರೆ ಆತನಿಗೂ ಒಂದು ಕುಟುಂಬವಿತ್ತು – ಮೂರು ನಾಯಿಗಳ ಕುಟುಂಬ. ಪ್ರತಿದಿನ ಸಂಜೆ ಕೆಲಸ (?) ಮುಗಿಸಿ ಜೋಪಡಿಯ ಬಳಿ ಮರುಳುತ್ತಿದ್ದಂತೆ, ಆ ಮೂರೂ ನಾಯಿಗಳು ಉತ್ಸುಕತೆಯಿಂದ ಓಡಿಹೋಗಿ, ತಮಗಾಗಿ ತಪ್ಪದೇ ತರುತ್ತಿದ್ದ ಯಾವುದಾದರೂ ತಿನಿಸಿಗಾಗಿ ಮೇಲೆ ಹಾರಿ, ನೆಕ್ಕಿ, ಆತನೊಂದಿಗೆ ಆಡಿಕೊಳ್ಳುತ್ತಿದ್ದವು. ಮರುದಿನ ಆತ ಹೊರಡುವವರೆಗೆ ಆ ಜೋಪಡಿಯ ಬಳಿಯೇ ಅವುಗಳ ಠಿಕಾಣಿ.

## ನನ್ನಲ್ಲಿ ಮೂಡಿದ ಪ್ರಶ್ನೆ

ಆ ವ್ಯಕ್ತಿಯತ್ತ ಮೊದಲು ನನ್ನ ಗಮನ ಸೆಳೆದದ್ದು ವೀಣಾ. ಅನಂತರದ ಸುಮಾರು ಎರಡು ವರ್ಷಗಳ ಕಾಲವೂ, ಆತನ ದಿನಚರಿಯಾಗಲಿ, ಜೀವನ ಸ್ಥಿತಿಯಾಗಲಿ ಬದಲಾಗಿರಲಿಲ್ಲ (ಎರಡು ವರ್ಷಗಳ ನಂತರ, ಆ ರಸ್ತೆಯನ್ನು ವಿಶಾಲಗೊಳಿಸುವ ಸಲುವಾಗಿ ಅಲ್ಲಿಗೆ ಬಂದ ಜೆಸಿಬಿಗಳ ಕ್ರೂರ ಹಲ್ಲುಗಳು ಆ ಜೋಪಡಿಯನ್ನು ಪುಡಿ ಮಾಡಿ ಎಸೆದಿದ್ದವು. ತನ್ನ ಸ್ಥಿರಾಸ್ತಿ ಕೈತಪ್ಪಿಹೋದಮೇಲೆ ಆತ ಅಲ್ಲಿಂದ, ನಮ್ಮಿಂದ ಶಾಶ್ವತವಾಗಿ ಮರೆಯಾಗಿಹೋದ. ಎಲ್ಲಿಹೋದ ಎಂದು ತಿಳಿಯಲಿಲ್ಲವಾದರೂ ಆತ ಹುಟ್ಟುಹಾಕಿದ ಚರ್ಚೆಯಿಂದಾಗಿ ಆತನ ಚರ್ಯೆಗಳು ನನ್ನ ನೆನಪಲ್ಲಿ ಶಾಶ್ವತವಾಗಿ ಉಳಿದಿವೆ. ಹಾಗಾಗಿ, ಈ ಲೇಖನವನ್ನು ಆ ಅಜ್ಞಾತ ವ್ಯಕ್ತಿಗೆ ಅರ್ಪಿಸಬಯಸುತ್ತೇನೆ.) ಆತನ ಏಕಾಂಗಿಜೀವನ ಕಂಡು ಮರುಗುತ್ತ ಒಮ್ಮೆ ವೀಣಾ ಹೇಳಿದ್ದಳು: 'ಪಾಪ. ಯಾರೂ ಇಲ್ಲದ ಆತನನ್ನು ಒಂಟಿತನ ಅದೆಷ್ಟು ಕಾಡುತ್ತದೆಯೋ' ಎಂದು.

ಇದರಿಂದಾಗಿಯೇ ನನ್ನಲ್ಲಿ ಒಂದು ವಿಚಿತ್ರ ಪ್ರಶ್ನೆ ಮೂಡಿದ್ದು: 'ಆತ ಏಕೆ ಬದುಕಿದ್ದಾನೆ?' ಎಂದು.

ಮಕ್ಕಳು ಬೆಳೆದು ದೊಡ್ಡವರಾಗುವುದನ್ನು ಕಾಣಬೇಕು ಎಂಬ ಆಸೆಯಿಂದಲೂ ಆತ ವಂಚಿತ. ಸಂಗಾತಿಯ ಜೊತೆಗಿನ ಸುಖಜೀವನ ನಡೆಸುತ್ತ ಬದುಕಬೇಕು ಎಂಬ ಬಯಕೆಯಾಗಲಿ, ಅಥವ ತನ್ನನ್ನು ಆಧರಿಸಿರುವವರಿಗಾಗಿ ಬದುಕಬೇಕು ಎಂಬ ಅನಿವಾರ್ಯತೆಯಾಗಲಿ ಆತನಿಗಿರಲಿಲ್ಲ. ಪ್ರಪಂಚ ಸುತ್ತಾಡಿ, ಎಲ್ಲವನ್ನೂ ನೋಡಿ ಆನಂದಿಸಬೇಕು ಎಂಬ ಆಸೆಯಿಂದಲೂ ಆತ ವಂಚಿತ. ಇನ್ನು, ಬೌದ್ಧಿಕವಾಗಿ ಏನನ್ನೋ ಸಾಧಿಸಬೇಕು ಎಂಬ ಛಲದ, ಅಥವ ಮತ್ತಾವುದನ್ನೋ ಗೆಲ್ಲಬೇಕು, ಗುರಿ ಮುಟ್ಟಬೇಕು ಎಂಬ ಹಟದ ಸಲುವಾಗಿ ಆತ ಬದುಕಿದ್ದಂತೆ ಕಾಣಲಿಲ್ಲ. ಹೀಗೆ, ಬದುಕಲು ಯಾವುದೇ ಆಸೆ ಅಥವ ಉದ್ದೇಶವಿಲ್ಲದೆ, ಪ್ರತಿನಿತ್ಯ ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಜಂಜಾಟದ ದುಡಿತಕ್ಕೆ ಮಾತ್ರವೇ ಮೀಸಲಾಗಿದ್ದ ದುರಂತ ಬದುಕನ್ನು ಆತ ಏಕೆ ಬದುಕುತ್ತಿದ್ದಾನೆ? ಯಾವುದೇ ಔಚಿತ್ಯವಿಲ್ಲದ, ನೀರಸ ಬದುಕು ದೂಡುತ್ತ ಆತ ಏಕೆ ತಾನೆ ಬದುಕಿದ್ದಾನೆ? ಆತನ ಸ್ಥಿತಿಯ ಹಿನ್ನೆಲೆಯಿಂದ ಅವಲೋಕಿಸುವುದಾದರೆ, 'ತನ್ನ ಮುಂದಿನ ಬದುಕು ಉತ್ತಮವಾಗುತ್ತದೆ, ಆ ಸುಖಕ್ಕಾಗಿ ಕಾಯಬೇಕು' ಎಂಬ ನಿರೀಕ್ಷೆಯೂ ಅತನಿಗಿದ್ದುದು ಸಂದೇಹವೆ. ಹಾಗಿರುವಾಗಿ 'ನಾಳೆ'ಗಳಲ್ಲಿ ಆತ ಏನನ್ನು ತಾನೆ ನಿರೀಕ್ಷಿಸುತ್ತ ಬದುಕಿದ್ದಾನೆ? ಸರಳವಾಗಿ 'ಆತ ಏಕೆ ಬದುಕಿದ್ದಾನೆ?' ಎಂಬ ಪ್ರಶ್ನೆ ನನ್ನನ್ನು ಗಾಢವಾಗಿ ಕಾಡಿತ್ತು.

ನನ್ನ ಪ್ರಶ್ನೆಯನ್ನು ಅಥವ ನನ್ನಲ್ಲಿ ಮೂಡಿದ ಈ ಕುತೂಹಲವನ್ನು ವೀಣಾ ಜೊತೆ ಒಮ್ಮೆ ಹಂಚಿಕೊಂಡಾಗ ಆಕೆ ನನಗೆ ಛೀಮಾರಿ ಹಾಕಿ ಹೇಳಿದ್ದಳು.

'ಒಂದು ಸಣ್ಣ ಮನೆಯನ್ನು ಕಟ್ಟಲು ಸಾಲ ಸೂಲ ಮಾಡಿ ಹೆಣಗಾಡುತ್ತಿರುವ ನಮ್ಮನ್ನು ಕಂಡರೆ, ಹತ್ತಾರು ಅಂತಸ್ತುಗಳ ಮನೆಯನ್ನು ಲೀಲಾಜಾಲವಾಗಿ ಕಟ್ಟಿರುವ ಅಂಬಾನಿ



ರಾಗಿಯ ತೆನೆಯೂ ಅಣಬೆಯಂತೆ ಪುನರಾಭಿವೃದ್ಧಿಯ ಮರುಕ್ಷಣ ಸಾಯುತ್ತದೆ

